ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 73-81
©*IIMRD*, Mysuru
IIMRD JOURNALS
www.iimrd.com

# ಅಜ್ಞಾನದ ಕಡಲಿಗೆ ಸುಜ್ಞಾನದ ಬೆಳಕಿನ ದೀಪ

**ನಾಗಪ್ಪ[1] ಮತ್ತು ಮತ್ತು ಡಾ.ಟಿ.ಕೆ.ಕೆಂಪೇಗೌಡ [2]**

[1]ಸಂಶೋಧನಾ ವಿದ್ಯಾರ್ಥಿ, [2] ಪ್ರಾಧ್ಯಾಪಕರು

ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಟಿ.ಯಲ್ಲಪ್ಪ ಅವರ* ***'ಕಡಲಿಗೆ ಕಳಿಸಿದ ದೀಪ'*** *ಎಂಬ ಕವನ ಸಂಕಲನವು "ಕವಿ ಎನಿಸಿಕೊಳ್ಳಬೇಕೆಂಬ ಆಸೆಯಿಂದ ಬಲವಂತದಿಂದ ಬರೆದ ಕವಿತೆಗಳಲ್ಲ. ಬದಲಿಗೆ ಅವರ ಒಳಗಿರುವ ಕವಿಹೃದಯದ ಅಂತರಾಳದ ಕನವರಿಕೆಗಳು, ಕನಸುಗಳು, ಅನುಭವಿಸಿದ ಅನುಭವಗಳೇ ಅಲೆಗಳಾಗಿ, ಸಾಮಾಜಿಕ ಹೊಣೆಗಾರಿಕೆಯನ್ನು, ಬದುಕಿನ ಬವಣೆವನ್ನು ವ್ಯಕ್ತಪಡಿಸುತ್ತವೆ. ಈ ಶೀರ್ಷಿಕೆಯು ಕತ್ತಲು ತುಂಬಿದ ಸಮಾಜದಲ್ಲಿ ದೀನದಲಿತರ ಬದುಕಿಗೆ ಬೆಳಕು ನೀಡುವ ದೀಪವಾಗಿ, ಬದುಕನ್ನು ಬೆಳಕಾಗಿಸಿಕೊಳ್ಳುವಂತ ಕವಿತೆಗಳೇ ದೀಪಗಳಾಗಿ ಸಂಕೇತಿಸುತ್ತವೆ. ಬಡತನ, ಹಸಿವು, ಅಂಧಕಾರ, ದೌರ್ಜನ್ಯ, ಅಸ್ಪೃಶ್ಯತೆ, ಜಾತಿವರ್ಣ, ಮತ-ಬೇಧಗಳಿಂದ ತುಂಬಿದ ಈ ಬದುಕೆಂಬ ಕಡಲು ಸಂಕೇತವಾಗಿ ಕಾಣಬರುತ್ತದೆ. ಈ ಸಂಕಲನವು ದಲಿತ ಬಂಡಾಯದ ಸಂವೇದನೆಗಳನ್ನು ಒಳಗೊಂಡಿರುವಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಬಂಡಾಯ ಸಾಹಿತ್ಯ, ಕಡಲಿಗೆ ಕಳಿಸಿದ ದೀಪ, ಟಿ. ಯಲ್ಲಪ್ಪ

**ಪೀಠಿಕೆ**

ಟಿ.ಯಲ್ಲಪ್ಪ ಅವರ 'ಕಡಲಿಗೆ ಕಳಿಸಿದ ದೀಪ' ಎಂಬ ಕವನ ಸಂಕಲನದ 'ಬಯಲು ಹಾಡು' ಕವಿತೆಯಲ್ಲಿ ಒಂದುಕಡೆ ನೆಲೆಗೊಳ್ಳದ ಬದುಕಿನ ಭವಣೆಯನ್ನು ಮಾರ್ಮಿಕವಾಗಿ ಹೇಳಿರುವುದು ಗಮನಾರ್ಹವಾಗಿದೆ. ಬದುಕೆಂಬುದು ಬಯಲಿಗೆ ಹೋಲಿಸಿಕೊಂಡು ಸರಿಯಾಗಿ ಬದುಕನ್ನು ಕಟ್ಟಿಕೊಳ್ಳುವತ್ತಾ ಸದೃಢವಾಗಿ ನಿಲ್ಲುವಂತೆ, ಕಾಯಕದೊಂದಿಗೆ ಹಸನುಗೊಳ್ಳುವ ಪ್ರಕ್ರಿಯೆ ಈ ಕವನದಲ್ಲಿ ಕಾಣಬಹುದು. ಕವಿಯ ಮನವು ಸ್ವಾಭಿಮಾನದ ಸಂತನಾಗಿ,

***"ನಿಮ್ಮ ಸುತ್ತ***
***ಹೊಗಳಿಕೆ ಉತ್ತಗಟ್ಟುವ***
***ಚಿತ್ತ ನನಗಿಲ್ಲ***
***ನೀವು ಬಾಗಿಸಿದ ಕಡೆ***
***ಬಾಗುವ ಬೆತ್ತ ನಾನಲ್ಲ"*** [1] (ಬಯಲು ಹಾಡು ಕವಿತೆಯ ಸಾಲುಗಳು)

*Please cite this article as:* ದಸ್ತಪ್ಪ ಮತ್ತು ಸತೀಶ್‌ಕುಮಾರ್ ಶೆಟ್ಟಿ. (2025). ಹೈದರಾಬಾದ್ ಕರ್ನಾಟಕ ಪ್ರದೇಶದ ಕಾರ್ಮಿಕರ ಚಾರಿತ್ರಿಕ ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 73–81

ಇಲ್ಲಿ ತಮ್ಮನ್ನು ಹೊಗಳಿಸಿಕೊಂಡು ಇನ್ನೊಬ್ಬರ ಮಾತಿಗೂ ಮರಳಾಗದೆ, ಅವರು ಹೇಳಿದಂಗೆ ಕೇಳುವ ಮಾತೇ ಇಲ್ಲ ಎನ್ನುವರು. ಇಲ್ಲಿ ಮೇಲ್ವರ್ಗದ ಅಧಿಕಾರ, ದರ್ಪ–ದಬ್ಬಾಳಿಕೆಗಳಿಗೆ ಹೆದರದೆ, ಸ್ವತಂತ್ರವಾದ ಬದುಕು ಕಟ್ಟಿಕೊಳ್ಳಲು ಸ್ವಾಭಿಮಾನದ ಛಲವನ್ನು ಬಿತ್ತಿದ್ದಾರೆ. ಹಾಗೆಯೇ ಸಿಂಹಾಸನ, ಸಾಮ್ರಾಜ್ಯ, ಸಲಾಮುಗಳು ಮತ್ತು ಕಾವಿ–ಖಾಕಿಗಳ–ಖಾದಿಗಳ ನೆರಳಿಲ್ಲದೆ, ನೆರಳನ್ನು ಬಯಸದೆ, ಜಯಕಾರಗಳನ್ನು ದೂರ ಬಿಟ್ಟು, ಅಂತಹ ಕೀರ್ತಿಶನಿಯ ಅನಾಚಾರಗಳಿಗೆ ಧಿಕ್ಕರಿಸಿ, ಸ್ವಾಭಿಮಾನದ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ 'ಸೊಲ್ಲು' ಕವಿತೆಯು ಆದರ್ಶಪ್ರಾಯವಾಗಿ ನಿಲ್ಲುತ್ತದೆ. ಮತ್ತು ತಮ್ಮ ಬದುಕಿನ ಉದ್ದೇಶವನ್ನು ದಾಖಲಿಸುತ್ತಾರೆ.

'ಚರಮಗೀತೆ' ಕವಿತೆಯಲ್ಲಿ ಕವಿಯುವ ಬದುಕನ್ನು ಆಸ್ವಾದಿಸುವ ಮತ್ತು ತನ್ನ ಬಾಳನ್ನು ಬಾಳುವ ಮಹಾದಾಸೆಯ ಮನಸು ಹಾಗೂ ಕನಸುಗಳನ್ನು ಹೊತ್ತು ನಡೆಯುವುದನ್ನು ಮನವರಿಕೆ ಮಾಡುತ್ತಾರೆ. ಮೃದುಭಾವದ ಬದುಕಿಗೆ ಅಡ್ಡಿಗೊಂಡರೆ ಸುಡುವ ಬೆಂಕಿಯಾಗಿ ಭಸ್ಮವಾಗುವಿರಿ, ಎಂಬಂತ ಕ್ರಾಂತಿಯ ಕಿಡಿಯನ್ನು ಕಾರುವುದನ್ನು ಮನಗಾಣಬಹುದು. ಹೌದು, ಭೂಮಿ ಮೇಲೆ ಜೀವಿಸುವ ಎಲ್ಲಾ ಜೀವರಾಶಿಗಳಿಗೂ ತಮ್ಮದೇ ಆದ ಬದುಕು ಇದೆ. ತನ್ನ ತಾನು ಬದುಕಿದರೆ ಸಾಕು ಎಂಬಂತ ಸ್ಥಿತಿಯಲ್ಲಿ, ಬದುಕಲು ಬಿಡದ ಅನಾಗರಿಕರಿಗೆ ನಾಗರಿಕತೆಯ ನೀತಿಯನ್ನು ಬೋಧಿಸುವುದಾಗಿದೆ.

ಬಡತನದ ಬದುಕಿನಲ್ಲಿ ಹುಟ್ಟಿ ಬೆಳೆದ ಕವಿಯು 'ಸಂಕರ' ಶೀರ್ಷಿಕೆಯಿಂದ ಪ್ರಾರಂಭಿಸಿ, ನನ್ನ ಕೊನೆಯ ನಮಸ್ಕಾರ ಎನ್ನುವ ಪರಿಯು, ಈ ಸುಂದರವಾದ ನಿಸರ್ಗದ ಮಡಿಲಿನ ಮಹತ್ವ ಮತ್ತು ತಾಯಿತನದ ಅರಿವು, ಗಂಡಸ್ತನದ ಪರಕಾಷ್ಠೆಗಳು, ಎಲ್ಲವೂ ಕೂಡ ಸಹಕಾರ ಶಾಂತಿಯ ಸಹಬಾಳ್ವೆಯೊಂದಿಗೆ ಆತ್ಮಸಾಕ್ಷಾತ್ಕಾರದೊಂದಿಗೆ ಫಲಶೃತಿಗಳಾಗಿ ಜೀವಿಸಬೇಕು ಎನ್ನುತ್ತಾರೆ. ಇಲ್ಲಿ ಹೆಣ್ಣಿನ ಒಡಲಾಳದ ಶೀಲವಂತಿಕೆ ಹಾಗೂ ಹೆಣ್ಣಿನ ಸ್ಥಾನಮಾನಗಳ ಗೌರವ ಘನತೆಗಳನ್ನು ಬಿಂಬಿಸುತ್ತಾ, ಭೂಮಿಯು ಸರ್ವರ ಸ್ವತ್ತು, ಅದು ಕೆಲವರಿಗೆ ಮೀಸಲಾಗದೆ ಸರ್ವರಿಗೂ ಸಮಪಾಲ ದೊರಕಿ ಸೌಹಾರ್ದ ಜೀವನವನ್ನು ಕಟ್ಟಿಕೊಡುವುದಾಗಿದೆ.

ಕಣ್ಣೋಟಕ್ಕೆ ಸಿಕ್ಕ ಕಂದಾಚಾರಗಳಿಗೆ 'ಕಣ್ಗಾವಲಾಗಿ' ಈ ಕವಿತೆಯಲ್ಲಿ ಪ್ರಶಂಸಿಸುತ್ತಾ, ಸ್ತ್ರೀ ಸಂರಕ್ಷಣೆಯ ಕುರಿತು

***"ಯಾವ ಮಾಯದ ಭೂತ***
***ಆಯಾ ತಪ್ಪಿದ ವೇಳೆ***
***ನಿನ್ನ ನುಂಗಿ ನೀರು ಕುಡಿದಿತ್ತೋ ಕಾಣೆ!"*** [2]

ಅಂದರೆ ಹೆಣ್ಣು ಮನೆಯೊಳಗೆ ಇದ್ದರೂ ಆಕೆಯನ್ನು ಇನ್ನೊಬ್ಬರು ಕಿತ್ತು ತಿನ್ನುವಂತಾಗಬಾರದು. ಬದಲಾಗಿ, ಆಕೆಯನ್ನು ಕಾಪಾಡುವ ರೆಪ್ಪೆಯಾಗಿ ಹಣ್ಣಿನ ಸಿಪ್ಪಯಂತೆ ಸುರಕ್ಷಿತ ರಕ್ಷಣೆ ನೀಡುವ ಕರ್ತವ್ಯವನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ.

ಜಾನಪದೀಯವಾದ ಬದುಕಿನ ಸೊಗಡನ್ನು ಒಳಗೊಳ್ಳುತ್ತಾ, ಆಚರಣೆಗಳನ್ನು ಮಾಡುವ ಅವೈಜ್ಞಾನಿಕ ವಿಚಾರಗಳನ್ನು ಬಿಟ್ಟು ಸುಜ್ಞಾನದೊಂದಿಗೆ ಜ್ಞಾನದ ಅರಿವಿಗೆ ಹಂಬಲಿಸಿ, ಮುತ್ತಿನಂತೆ ಸದಾ ಮಿನುಗುತ್ತಾ ಜೀವಿಸಬೇಕು ಎಂಬ ತಿಳುವಳಿಕೆಯನ್ನು ಕಟ್ಟಿಕೊಡುತ್ತಾರೆ. ಹೆಣ್ಣು ಅನುಭವಿಸುವ ಸಂಕಷ್ಟ,

ನರಕಯಾತನೆಗಳು ಎಲ್ಲವೂ ಕೂಡ ಪುರುಷನ ಆಸೆ ನೀಗಿಸುವುದಕ್ಕಾಗಿ ಸೀಮಿತವಾಗಿ ನಿಂತಿದ್ದಾಳೆ. ಅದನ್ನು ಅನುಭವಿಸಿ, ಸಂಭ್ರಮಿಸಿದವರಿಗೆ ಗೌರವ ಪ್ರಶಸ್ತಿಗಳನ್ನು ನೀಡಿ ಆನಂದಿಸುವ ಕೆಟ್ಟ ಸಮಾಜದ ಮುಖವಾಡದ ಬಣ್ಣ ಬಯಲು ಮಾಡುವುದಕ್ಕೆ ಈ ಕವಿತೆ ಸಾಕ್ಷಿಯಾಗಿದೆ. ಹಾಗೂ ದೀನದಲಿತರ ಬದುಕನ್ನು ಬಿಚ್ಚಿ ಹೇಳುವುದಾಗಿದೆ.

'ಅಕ್ಕ ಚಿಟ್ಟೆ ಮತ್ತು ಗಾಳಿಪಟ' ಈ ಕವಿತೆಯ ಸಾಲುಗಳಲ್ಲಿ 'ಹೆಣ್ಣು ಸಂಸಾರದ ಕಣ್ಣು. ಹಾಗೆ ಸಂಸಾರಕ್ಕೆ ಅವಳೇ ಜೀವಾಳ'. ಒಂದು ಹೆಣ್ಣು ತಾನು ಬದುಕಿ ಮನೆಯಲ್ಲಿನ ಹೆಣ್ಣು ಮಗುವಿಗೆ ಉತ್ತಮ ಹಾದಿಯನ್ನು ತಿಳಿಪಡಿಸುವ ತಾಯಿಯಾಗುತ್ತಾಳೆ. ಘನತೆ ಗೌರವದೊಂದಿಗೆ ಬದುಕಿ ಬಾಳಲು ಕಲಿಸುವ ಶಿಕ್ಷಕಿ ಆಗಿದ್ದಾಳೆ. ಹಾಗೆಯೇ ನಡೆನುಡಿಗಳಿಂದ ಸಂಸ್ಕಾರವಂತಳಾಗಿ ಒಂದು ಮನೆಯಿಂದ ಮತ್ತೊಂದು ಮನೆಗೆ (ಗಂಡನ ಮನೆ) ಹೋಗಿ, ಆ ಮನೆಯ ದೀಪ ಬೆಳಗುವ ಕರ್ತವ್ಯ ಹೊಂದಿದ್ದಾಳೆ.

ಹೆಣ್ಣು ಹುಟ್ಟಿದ ಮನೆಯಲ್ಲಿ ಬೆಳೆದು ನಿಂತು, ಸರಿಯಾದ ವಯಸ್ಸಿಗೆ ಅಡ್ಡ ದಾರಿ ಹಿಡಿಯುವುದೇ ಚಿಟ್ಟೆಯಾಗಿ ಹಾರದೆ, ಜೀವನಕ್ಕೊಬ್ಬನನ್ನು ಕೈ ಹಿಡಿದು ಬದುಕು ಸಾಗಿಸುತ್ತಿರುವಾಗ, ಅವನ ಮರಣದ ಬಳಿಕ ಮರಳಿ ತವರಿನ ಮಡಿಲು ಸೇರುವಂಥದ್ದು ಕವಿ 'ಅಕ್ಕ ಚಿಟ್ಟೆ ಮತ್ತು ಗಾಳಿಪಟ' ಸಂಕೇತವಾಗಿ ಹೆಣ್ಣಿನ ಬದುಕಿನ ತಿರುಳನ್ನು ಬವಣೆಯನ್ನು ಚಿರಸ್ಥಾಯಿಯಾಗಿಸಿದ್ದಾರೆ.

ಜೀವನದ ಪಯಣದಲ್ಲಿ ಅಡೆತಡೆಗಳು, ಸುಖ–ದುಃಖಗಳು, ಕಷ್ಟಕಾರ್ಪಣ್ಯಗಳು ತುಂಬಿಕೊಂಡು ಬಡತನದ ಬೇಗೆಯಲ್ಲಿ ಬೇಯುವುದು. ಆದರೂ ಕೂಡ ಬದುಕುವ ಆಸೆ, ಸಾಧಿಸುವ ಛಲ, ಕುಟುಂಬದ ಏಳಿಗೆ ಎಲ್ಲವೂ ಕೂಡ ತಾನಾಗಿಯೇ ಬಾರದೆ, ನಿರಂತರ ಪರಿಶ್ರಮ, ಹೋರಾಟದ ಹಾದಿಯನ್ನು ಹಿಡಿದು ಪ್ರಯತ್ನಗಳನ್ನು ಫಲವಾಗಿಸಿಕೊಂಡು ನೆಲೆ ನಿಂತು ಜೀವಿಸುವುದಾಗಿದೆ. ಅದೇ ರೀತಿಯ ಕವಿತೆಯು ಇಲ್ಲಿ–

***"ಕುಣಿಯಲು ಬಾರದ ಹೆಜ್ಜೆಗಳಿಗೆ***
***ನಾನು ಗೆಜ್ಜೆಗಳ ಕಟ್ಟಿಕೊಂಡೆ,***
***ಗೆಜ್ಜೆಗಳ ಕಟ್ಟಿದ್ದು***
***ಹೆಜ್ಜೆಗಳ ಕುಣಿತಕ್ಕೋ?***
***ಅಥವಾ ಹೆಜ್ಜೆಗಳ ಸಪ್ಪಳಕ್ಕೋ?***
***ನಾನು ಒಂದು ಅರಿಯೆ"*** [3] (ಗೆಜ್ಜೆಗಳು ಕವಿತೆಯ ಸಾಲು)

ಎನ್ನುವಂತಹ ಈ ಸಾಲುಗಳು ನಿರ್ಗತಿಕವಾದ ಬದುಕಿನಲ್ಲಿ ಬದುಕಿನ ಆಸೆ ಹೊತ್ತು, ಸರಿಯಾದ ಸಮಯ ಮತ್ತು ಜ್ಞಾನದೊಂದಿಗೆ ಸಾಧನೆಯ ಹಾದಿಯನ್ನು ಮುಟ್ಟುವುದಕ್ಕೆ ಅಡೆತಡೆಗಳನ್ನು ದಾಟಬೇಕು. ಸರಿಯಾದ ಸ್ಥಾನಮಾನಗಳಲ್ಲಿ ತಂದೆ–ತಾಯಿಗಳ ಶ್ರಮ, ಆಸೆ, ಕನಸು ಎಲ್ಲವೂ ಫಲದಾಯಕವಾಗುವುದಕ್ಕೆ ಇತರರ ಆಸರೆ ಬೆಂಬಲ ಸಹಾಯವಿಲ್ಲದೆ, ಸ್ವತಂತ್ರವಾಗಿ ತನ್ನನ್ನು ತಾನೇ ಗಟ್ಟಿಗೊಳಿಸಿಕೊಂಡು, ಬದುಕಿನ ಪಯಣಕ್ಕೆ ಎದೆಕೊಟ್ಟು ನಡೆದು

**"ನಾನೇ ಕುಣಿಯಲು ಕಲಿತುಕೊಂಡೆ"**[4]

ಎನ್ನುವುದು ಕವಿ ತನ್ನ ಕನಸನ್ನು ನನಸಾಗಿಸಿಕೊಂಡು, ಸಾಧನೆಯ ಶಿಖರ ತಲುಪಿದ ಪರಿಯನ್ನು ಇಲ್ಲಿ ಕಟ್ಟಿಕೊಡುತ್ತಾನೆ. ವಾಸ್ತವದ ಬದುಕಿನಿಂದ ಮುಕ್ತಿ ಹೊಂದಿ, ಹೊಸ ಬದುಕಿನ ಹೆಜ್ಜೆ ಮತ್ತು ಕುಣಿತಗಳ ಪರಿಭಾವನೆಯೊಂದಿಗೆ ಹೋರಾಡುತ್ತಲೇ, ಅವಕಾಶಗಳ ಆಗಮದಿಂದ ಹೊಸ ಬದುಕನ್ನು ಕಟ್ಟಿಕೊಳ್ಳುವ ಹಂಬಲತೆಯು ಹೇರಳವಾಗಿದೆ.

ಮುಂದೆ 'ಋತುಮಾನ' ಕವಿತೆಯ ಸಾಲುಗಳಲ್ಲಿನ ದಾರಿದ್ರ್ಯದ ಸಂಕಟ, ವಾಸ್ತವ ಬದುಕಿನ ಅನಾವರಣವು ದೀನದಲಿತರ ಬದುಕಿನ ಚಿತ್ರಣಗಳು, ಹೆಣ್ಣಿನ ದೌರ್ಜನ್ಯಗಳು, ಮೇಲ್ವರ್ಗದವರ ಅಧಿಕಾರ, ದರ್ಪಗಳಿಂದ ಬೆಂದು ಬಸವಳಿದ ಜೀವಗಳು, ಹಿಂಸೆಯ ಕಣ್ಣೀರಿನ ಕಂಬನಿಯೊಂದಿಗೆ ಬಾಳನ್ನು ಹಸನಾಗಿಸುವ ಪರಿಯು ಎದ್ದು ಕಾಣುತ್ತದೆ. ಒಮ್ಮೆ ಇದ್ದ ಬದುಕಿನ ಸಂತೋಷ ಇನ್ನೊಮ್ಮೆ ಇಲ್ಲದೆ, ಪ್ರಕೃತಿಯಂತೆ ಎಲ್ಲವನ್ನು ಮೆಟ್ಟಿನಿಲ್ಲುವುದು. ಹರಿದು ಹಂಚಿ ತಿನ್ನುವ ಜನರ ಮಧ್ಯೆ ಅವರ ಮಧವಡಗಿಸಿ, ಎದೆಗುಂದದೆ ಮುನ್ನುಗ್ಗಿ ಮಾನವರಾಗುವುದೇ ಪರಮ ಗುರಿ ಎಂಬುದನ್ನು ಕಾಣಬಹುದು.

ಟಿ.ಯಲ್ಲಪ್ಪ ಅವರ ಕವಿತೆಗಳು ದಲಿತರ ಬದುಕಿನ ಕಥನಗಳನ್ನು, ಹೆಣ್ಣಿನ ರೋಧನೆಗಳನ್ನು, ನೊಂದ ಮನಸ್ಸುಗಳಿಗೆ ಜಾಗೃತಿ ಮೂಡಿಸುವುದೇ ಆಗಿದೆ. ನ್ಯಾಯ, ಸಮಾನತೆಗಳನ್ನು ದೊರಕಿಸುವ ಆಶಯಗಳನ್ನು ಹೊತ್ತು, ಕಡಲೊಳಗಿನ ದೋಣಿಯಾಗಿ ದಡ ಸೇರಲು ಬೆಳಕು ನೀಡುವ ದೀಪಗಳಾಗಿ ಮಹತ್ವದ ಪಾತ್ರ ವಹಿಸಿವೆ.

'ಭೂಮಿಗೀತಾ', 'ಋತುಪರ್ವ', 'ಪ್ರಾರ್ಥನೆ', 'ಪರ್ಯಾಯ', 'ಪರಿಣಾಮ', ಕವಿತೆಗಳಲ್ಲಿ ನೊಂದ ಮನಸ್ಸುಗಳ ಜಾಗೃತಿ, ತಿರುಗಿ ಬೀಳುವ ರೋಷತೆ, ಪ್ರಶ್ನಿಸುವ ಧೈರ್ಯ, ಪ್ರತಿಭಟನಾತ್ಮಕ ನೆಲೆಗಳು, ಸ್ಥಾನಮಾನಗಳ ಅರಿವು, ಹೋರಾಡುವ ನಾಯಕನ ಆಗಮನದ ಬಯಕೆ, ಹೀಗೆ ಹತ್ತು ಹಲವು ಸಮಾಜದ ನ್ಯಾಯ ಸಮಾನತೆಯ ಅಂತರ್ಬಯಕೆಗಳನ್ನು ಹಂಬಲಿಸುತ್ತಿರುವ ಆಶಯಗಳು ಅಡಕವಾಗಿವೆ. ಮಾನವಾದಿಯಾಗಿ ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವ ಮನೋಧೋರಣೆ, ತಾವು ಬದುಕಿ ಇತರರನ್ನು ಬದುಕಿಸುವುದು. ಪ್ರಾಯದ ತಲ್ಲಣಗಳು ಕವಿಯ ಸ್ವ–ಅನುಭವಗಳು, ಪಾಲುದಾರಿಕೆ ಎಲ್ಲವೂ ಕೂಡ ಕನಸೊತ್ತ ಕವಿತೆಗಳಾಗಿ ಮೂಡಿಬಂದಿವೆ.

ಜ್ಞಾನಾರ್ಜನೆಯೊಂದಿಗೆ ಜಯದ ಕೀರ್ತಿಯನ್ನು ಪಡೆಯುವುದನ್ನು 'ತುಡಿತ' ಕವಿತೆಯಲ್ಲಿ ಕಂಡುಬಂದರೂ, 'ಅರಿವು' ಕವಿತೆಯಲ್ಲಿ ವರ್ಣ ವ್ಯವಸ್ಥೆಯ ದಾರುಣತೆಗಳನ್ನು, ಶ್ರಮ ಸಂಸ್ಕೃತಿಯ ಚಿಂತಾಜನಕ ಸ್ಥಿತಿಗಳನ್ನು ಕಾಣಬಹುದು. ಇಲ್ಲಿ ಶಿವರಾಮ ಕಾರಂತರ 'ಚೋಮನ ದುಡಿ'ಯ ಕಾದಂಬರಿಯ ಚಿತ್ರಣಗಳು, ತಲ್ಲಣಗಳು ಅರಿವಿನ ಹಾದಿಯಲ್ಲಿ ಸಾಗುತ್ತವೆ.

***"ಯಾರ ಬದುಕಿನ ದಾರಿಗೆ***
***ಟಾರಾದೆ ನೀನು***
***ಯಾರ ಪಯಣದ ತುಳಿತಕ್ಕೆ***
***ದಾರಿಯಾದೆಯೋ ನೀನು?"*** [5] (ಒಡಲಾಳ ಕವಿತೆಯಿಂದ)

ಸಮಾಜದೊಳಗೆ ಪ್ರಶ್ನಿಸದಿರುವುದು, ಮೇಲ್ವರ್ಗದವರ ಕುಳಿತಕ್ಕೆ ಒಳಗಾದ ಸಾವಿರಾರು ದೀನದಲಿತರ ಬದುಕಿನ ಚಿತ್ರಣ ಹಸಿಯಾಗಿಸುತ್ತದೆ. ಹೋರಾಟದ ಬದುಕು, ನೊಂದವರ ನೋವಿನ ದನಿಯಾಗಿ ಬಂಡಾಯದೊಂದಿಗೆ, ಕ್ರಾಂತಿಯೊಂದಿಗೆ ಸುಭದ್ರ ಬದುಕನ್ನು ಸಾಗಿಸುವುದನ್ನು ಕಲಿಯಬೇಕಾಗಿದೆ. ಈ ಕವಿತೆಯ ಅಂತರಾಳದ ಅರುವಿನ ಫಲತೆಗಳು ಮನದಟ್ಟು ಮಾಡುತ್ತವೆ.

**"**ಓ ಕಡಲ ಮಿತ್ರನೇ ನನ್ನ ಬೆಳಕ**"**[6] (ಕಡಲಿಗೆ ಕಳಿಸಿದ ದೀಪ ಕವಿತೆಯಿಂದ)

ಮೊದಲ ತಲೆಮಾರಿನವರ ಸಾಹಿತ್ಯ ತಾಯಿಯ ಕೈ ಹಿಡಿದು, ಕವಿತೆಗಳ ರಚನೆಯೊಂದಿಗೆ ಹಿರಿಯ ತಲೆಮಾರಿನೊಂದಿಗೆ ಅದೇ ಹಾದಿ ತುಳಿಯುವ ಪರಿಯು ಅಗಾಧವಾಗಿದೆ. ಶಾಂತಿ ಇಲ್ಲದೆ ಕ್ರಾಂತಿಯನ್ನೇ ಅಸ್ತ್ರವಾಗಿಸಿದ ಸಾಹಿತ್ಯದೊಳಗಿನ ಸಂಪರ್ಕದ ಕೊಂಡಿಯ ಬೆಸುಗೆ ಸೇರುವ ತವಕಗಳು ಕವಿಯ ಮನದಲ್ಲಿ ಹೇರಳವಾಗಿ ಬರುತ್ತದೆ.

***"ಬೇಡ,***
***ಉರಿಯುವ ತಾರೆಗಳ ನಡುವೆ***
***ಮಿನುಗುವ ಚಂದ್ರಮರ ನಡುವೆ***
***ನಗುವ ಸೊಡರಲ್ಲಿ ಯಾಕೆ***
***ತೈಲ ಕುಡಿಯುವ ಬಯಕೆ?"*** [7]

ಹಿರಿಯ ತಲೆಮಾರಿನವರ ಕಿವಿಮಾತುಗಳೊಂದಿಗೆ ಕವಿಯ ಆಶಯವು, ಸಂಘರ್ಷಗಳೇ ತುಂಬಿದ ಸಾಹಿತ್ಯದ ಹಾದಿಯೊಳಗೆ ತಾತ್ವಿಕ ಚಿಂತನೆ, ಧೋರಣೆಗೆ ಬದ್ಧಗೊಳಿಸಿಕೊಂಡು, ಸಾಹಿತ್ಯ ಕ್ಷೇತ್ರಕ್ಕೆ ತೆರೆದುಕೊಂಡು ಕತ್ತಲ ಬದುಕಿಗೆ ಬೆಳಕಾಗುವ ತವಕ, ತಮ್ಮ ಕವಿತೆಯ ದೀಪವು ಬೆಳಕು ನೀಡುವಂತಾಗಲಿ ಎಂಬ ಹಂಬಲ ಕವಿತೆಯ ಆಶಯವಾಗಿದೆ.

**'**ನನ್ನ ನಿನ್ನ ನಡುವೆ**'** ಕವಿತೆಯ ಸಾಲುಗಳಲ್ಲಿ ಬಡತನ, ಕೆಳಜಾತಿಗಳ ಗೋಳು, ಹೇಳಲಾಗದ ನೋವು, ಮಗ ಬದುಕು ಕಟ್ಟಿಕೊಳ್ಳುವ ಆಸೆ ತಾಯಿಯದು, ತಾಯಿಯ ಕಳವಳಕ್ಕೆ ಮಗನೇ ಬಲವಾಗಿ ನಿಲ್ಲುವುದು. ತಮ್ಮ ಅಸ್ತಿತ್ವದ ಇರುವುವಿಕೆಯನ್ನು ಕಾಣುತ್ತಾ, ಸಮಾಜದೊಂದಿಗೆ ಸೆಣಸಾಟ ಮಾಡುವುದು, ಎಲ್ಲವೂ ಕವಿಯ ವೈಯಕ್ತಿಕ ಬದುಕಿನ ಹೋರಾಟದ ತುಡಿತಗಳಾಗಿವೆ. ನೋವು ನುಂಗಿ ನೆಲಸಮ ಮಾಡಿ, ನಲಿವನ್ನು ಹುಡುಕುವುದು. ಸಮುದಾಯದೊಂದಿಗೆ ಹೋರಾಟದ ಹಾದಿ ಹಿಡಿದು ಸಮಾಜವನ್ನು ಪ್ರಶ್ನಿಸುವ ಪರಿಯು ಈ ಕವಿತೆಯಲ್ಲಿ ಮೂಡಿಬರುತ್ತದೆ.

ಸುಂದರ ಬದುಕಿನ ಕನಸೊತ್ತ ಕವಿಯ ನಯವಾದ ಮೃದು ಮನಸ್ಸಿನ ಕನವರಿಕೆ, ಕಂಡ ಕನಸುಗಳ ಈಡೇರಿಸಿಕೊಳ್ಳುವ ಹಂತದಲ್ಲಿ ಕಮರಿಹೋಗುವಾಗ ಹೆತ್ತವಳನ್ನು ಚೆಂದವಾಗಿಸುವತ್ತ,

***"ಅಮ್ಮ ಕಪ್ಪೆಂದು***
***ಹಳಿಯುವರು ಜನವೆಲ್ಲ***
***ಬೆಳಕುಗಳ ಕಪ್ಪಲ್ಲಿ ರಂಗೋಲಿ ಬಿಳುಪಾಗಿ***

***ಒಂದೊಂದೇ ಚುಕ್ಕಿ ಚೆಲ್ಲಾಡಿದರೆ***
***ಅಂಗಳದಲ್ಲಿ ಹಾಯ್ದು ಪೋಣಿಸುವೆ ರಂಗೋಲಿ***
***ನನ್ನ ಕೈಯೊಳಗೂ ಬದುಕು ನಕ್ಕಂತೆ***
***ಬೆರಳುಗಳ ಸರಳೊಳಗೆ***
***ಅಮ್ಮನ ಕನಸುಗಳು***
***ಹೊಳೆದಂತೆ ಫಳಫಳನೆ"*** [8] (ಅಮ್ಮ, ಅಂಗಳ, ರಂಗೋಲಿ–ಕವಿತೆಯ ಸಾಲುಗಳು)

ರಂಗೋಲಿ ತೀರವಲ್ಲದಾಗಿದೆ. ಬದುಕಿನ ಸ್ಥಿರತೆಯ ಅಂಗಳ ಅಸ್ಥಿರವಾದದ್ದು. ಹಾಗಾಗಿ ಅಂಗಳದಲ್ಲಿ ರಂಗೋಲಿಗಿಂತ ಹೆತ್ತ ಕರುಳಾದ ಕವಿಯು ಬದುಕನ್ನು ಬಣ್ಣಗಳಿಂದ ಕೂಡಿಸುತ್ತೇನೆ ಎಂದು ತಾಯಿಯನ್ನು ಸಮಾಧಾನಿಸುತ್ತಾನೆ. ಅಂದರೆ ಬದುಕನ್ನು ಪ್ರೀತಿಯಿಂದ, ಭರವಸೆಗಳಿಂದ, ವಾಸ್ತವ ಬದುಕಿನ ಮುಕ್ತಿ ಹೊಂದುವುದಾಗಿದೆ. ಬದುಕನ್ನು ಬದುಕಲು ಬಿಡದ ಜನರ ನಡುವೆ ಬದುಕಿ ತೋರಿಸುವ ರೋಷದ ಕಿಚ್ಚನ್ನು ತುಂಬಿಕೊಂಡ ಕವಿಯು, ಹೆಣ್ಣಿನ ಸಂಬಂಧಗಳ, ಬದುಕಿನ ವ್ಯಾಮೋಹ, ಕಾಳಜಿಗಳ, ಕಾವ್ಯ ಪ್ರೀತಿಯು ಎದ್ದು ಕಾಣುವಂತದ್ದಾಗಿದೆ.

ಟಿ.ಯಲ್ಲಪ್ಪ ಅವರ ಕಾವ್ಯವು ಕಲ್ಪನೆಯ ಕಾವಾಗದೆ, ನಿಜ ಬದುಕಿನ ಕನಸುಗಳು ಕನವರಿಕೆಗಳಾಗಿ ಬಿತ್ತರಿಸುತ್ತವೆ. ಜಾತಿ ವ್ಯವಸ್ಥೆಯ ಸಂಕರದಲ್ಲಿ ಸಿಕ್ಕು ಬೆಂದು, ಬೆವತು ಹೋದ ದೀನದಲಿತರ ಬದುಕಿನ ವ್ಯಥೆಯನ್ನು ಅನಾವರಣಗೊಳಿಸಿದ್ದಾರೆ. ಬದುಕಿನ ಹೋರಾಟದಲ್ಲಿ ಅಜ್ಞಾನದಿಂದ ಸುಜ್ಞಾನದೆಡೆಗೆ ಸಾಗುವ ಬೆಳಕಾಗಿ, ಶಿಕ್ಷಣದ ಜ್ಞಾನದೊಂದಿಗೆ ಬೆಳಕಲ್ಲಿ ಬೆಳಕಾಗುವ ವೇದನೆ, ಪ್ರೇಮ, ಕಾಳಜಿ, ಎಲ್ಲವೂ ಕೂಡ 'ಪಂಚಮರು' ಕವಿತೆಯ ಮೂಲಕ ತಿಳಿಸುತ್ತಾರೆ.

***"ಹಾಡುಗಳ ಜಾಡು ಹಿಡಿದು***
***ಕಾಡು ಹೊಕ್ಕನು ಒಬ್ಬಕವಿ"*** [9] (ಹಾಡುಗಳ ಜಾಡು ಹಿಡಿದ ಕವಿತೆಯಿಂದ)

ಇಲ್ಲಿ ಕವಿ ತನ್ನ ಹಿಂದಿನ ತಲೆಮಾರಿನ ಹೋರಾಟದ ಹಾದಿಯನ್ನು ಗಮನಿಸಿದ್ದಾನೆ. ಹಾಗೂ ತನ್ನ ಹಾದಿಯನ್ನು ತಾನು ಸಾಗುವ ಪ್ರಯತ್ನದ ಧೈರ್ಯ ಮಾಡಿದ್ದಾನೆ. ಹಿಂದಿನದನ್ನು ಬಿಟ್ಟುಕೊಡದೆ, ತಾನು ಮೈಗೂಡಿಸಿಕೊಳ್ಳದೆ, ಹೊಸದೇನನ್ನು ಕಾಣುವ ಹಂಬಲ, ತವಕದಲ್ಲಿ ತಲ್ಲೀನನಾಗುತ್ತಾನೆ. ತನ್ನದೇ ನೆಲೆಯನ್ನು ಗಟ್ಟಿಗೊಳಿಸುವ ಮಹಾದಾಸೆಯನ್ನು ಕವಿಯು ಜ್ಞಾನದ ಅರಿವಿನಿಂದ ಅನುಭವದ ಅಲೆಗಳೊಂದಿಗೆ, ಸಾಹಿತ್ಯದ ಸಾಗರದೊಳಗೆ ಪಯಣ ಮಾಡುವುದನ್ನು ನೋಡಬಹುದು.

***"ಅವನಿಗಾಗಿ***
***ಹಾಡುವವರು ಯಾರಿಲ್ಲೆಂದು***
***ಹಾಡಿದವು ಹಕ್ಕಿಗಳು ಕೊರಳೆತ್ತಿ***
***ಅವನೇ ಈ ಅವುಗಳ ಹಾಡಾಗಿದ್ದ***
***ಹಾಡಿನ ಜಾಡು ಹುಡುಕುತ್ತಾ***

***ಕಾಡು ಹೊಕ್ಕ ಕವಿಯಲ್ಲಿ***

***ಹಾಡು ಮಲಗಿತ್ತು ಬೆಚ್ಚಗೆ”*** [10] (ಹಾಡುಗಳ ಜಾಡು ಹಿಡಿದ ಕವಿತೆಯಿಂದ)

ಕವಿಯು ತನ್ನ ನೆಲೆ ತನಗಿಲ್ಲದಿದ್ದರೂ ಕೂಡ ಜಾತಿ, ಅಸ್ಪೃಶ್ಯತೆ, ದಲಿತರ ನೋವುಗಳಿಗೆ ಮಿಡಿದ ಜೀವಗಳು ಮಣ್ಣು ಸೇರುವಾಗ, ಹೋರಾಟಕ್ಕೆ ದಿಕ್ಕಿಲ್ಲವೆಂದು ಸೋಲುವುದಕ್ಕೆ ಮನಸ್ಸಾಗದೆ, ಶಕ್ತಿ ತುಂಬವ ಹಂಬಲದೊಂದಿಗೆ ಮೊದಲ ತಲೆಮಾರಿನೊಂದಿಗೆ ಕೈಜೋಡಿಸುವುದನ್ನು ಕಾಣಬಹುದು. ಇಲ್ಲಿ ದಲಿತ–ಬಂಡಾಯದ ಹೋರಾಟದ ಹಾದಿಯನ್ನು ಹಾಗೂ ಸಾಗಿಬಂದ ಚರಿತ್ರೆಯನ್ನು ಸಾರಿ ಹೇಳುವ ಕೆಲಸ ಕವಿ ಮಾರ್ಮಿಕವಾಗಿ ಸಮೀಕರಿಸಿಕೊಂಡಿದ್ದಾನೆ.

ಟಿ.ಯಲ್ಲಪ್ಪ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್, ಗಾಂಧೀಜಿ, ಲೋಹಿಯಾ, ಬಸವಣ್ಣ, ಕಾರ್ಲ್‌ಮಾರ್ಕ್ಸ್‌ರಂತವರ ಪ್ರೇರಣೆ–ಪ್ರಭಾವಗಳು ಓದಿನ ಅಧ್ಯಯನದ ಮುಖಾಂತರ ದಟ್ಟವಾಗಿ ಪ್ರಭಾವಿಸಿಕೊಂಡಿರುವುದು ಅವರ ಜ್ಞಾನ ಸೋಪಾಜ್ಞತೆಯ ಹಿರಿಮೆಯು ವ್ಯಕ್ತಪಡಿಸುವಂತದ್ದಾಗಿದೆ. ನಾನು ನನ್ನದು ಎಂಬ ಹುಚ್ಚು, ಅಹಂಕಾರ, ದರ್ಪಗಳಿಂದ ಕೂಡಿದ ಪ್ರಾಕೃತಿಕ ಸಮಾಜದೊಳಗೆ ಟಿ.ಯಲ್ಲಪ್ಪ ಅವರು ತಮ್ಮದೇ ಆದರ್ಶ ಆಶಯಗಳನ್ನು ಕೊಂಡುಕೊಳ್ಳುವಲ್ಲಿ ಯಶಸ್ವಿಯಾಗಿರುವುದನ್ನು ಅವರ ಕವಿತೆಗಳ ಧೋರಣೆಗಳು ಸಾಕ್ಷಿಪ್ರಾಯವಾಗಿವೆ.

‘ಪ್ರಾಯದ ಪಲುಕುಗಳು’, ‘ಮಣ್ಣಿನ ದೋಣಿ’, ‘ಅನ್ನಿಸುತ್ತಿದೆ’, ‘ಕಳೆದು ಹೋದವನ ಹಾಡು’, ‘ಕುಂಡದ ಗಿಡಗಳು’ ಈ ರೀತಿಯ ಕವಿತೆಯ ಸಾಲುಗಳಲ್ಲಿ ದುರ್ಮನಸುಗಳು ದರ್ಪಗಳಿಂದ ಕೂಡಿದ ನಡೆ–ನುಡಿ, ಜಾತಿ, ಮತ–ಧರ್ಮ, ಮೌಢ್ಯ, ಇತ್ಯಾದಿಗಳ ಸಂಕೋಲೆಗಳಿಂದ ಹೊರಬರುವ ಪ್ರಯತ್ನವಾಗಿದೆ. ಮನುಷ್ಯತ್ವದ ಪ್ರವಾಹ ಹರಿದು ಅರ್ಥಪೂರ್ಣ ಸಮಾಜ ಉದಯಿಸಬೇಕಾಗಿದೆ. ಹಲವಾರು ದೀನದಲಿತರ ಬದುಕಲ್ಲಿ ಹಿಂಸೆ, ಮರಣ, ಸೋತರಟ್ಟೆಗಳು ಮಾಯವಾಗುವುದಾಗಿದೆ. ಜಾತಿ, ಮತ–ಮೌಢ್ಯ, ಕುಲಕವಚಗಳಿಂದ ಕಳಚಿಕೊಂಡು, ಹೊಸ ಜೀವನ, ಹೊಸ ಚರಿತ್ರೆ, ಸಹಬಾಳ್ವೆಯನ್ನು ಕಾಣುವಲ್ಲಿ ಕವಿ ಹಾತೊರೆದಿದ್ದಾನೆ ಎಂಬುದು ಮನದಟ್ಟಾಗುತ್ತದೆ.

ದಲಿತ ಬಂಡಾಯದ ಮೊದಲ ತಲೆಮಾರಿನ ಕವಿಗಳ ಪ್ರಗತಿಪರರ, ಹೋರಾಟಗಾರರ ಹಾದಿಯನ್ನು ನೆನೆಯುತ್ತಾ, ಅವರಂತೆ ಬೆಳಕು ಚೆಲ್ಲುತ್ತಾ ಅನುಭವದ ಸಾರದೊಂದಿಗೆ, ಅಸ್ತಿತ್ವವನ್ನು ಮುಂದಿನ ಪೀಳಿಗೆಗೆ ಪಸರಿಸುವ ಕಾಯಕವನ್ನು ಕವಿ ಇಲ್ಲಿ ಮಾಡಿದ್ದಾನೆ. ಆರ್ಥಿಕತೆಯ ಪಲ್ಲಟಗಳಿಂದ ನಲುಗಿ ಹಸಿವು, ಬಡತನಗಳಿಂದ ಕೂಡಿದ ಬದುಕು ಮೆಲ್ಲ ಮೆಲ್ಲನೆ ಮೆಟ್ಟಿನಿಂತು, ಗುಡಿಸಲಿನಿಂದ ಬಂಗಲೆಗಳತ್ತ ಸಾಗಿ, ಸುಂದರ ಬದುಕನ್ನು ಕಟ್ಟಿಕೊಳ್ಳುವುದು ಆಗಬೇಕಿದೆ. ನೈಜ ಬದುಕಿನ ತಾಜಾ ಅನುಭವಗಳೊಂದಿಗೆ ಸಾಧನೆಯ ಶಿಖರಕ್ಕೇರುವ ಬಗೆಗಳನ್ನು, ಆಶೋತ್ತರಗಳನ್ನು ಟಿ.ಯಲ್ಲಪ್ಪ ಅವರು ತಮ್ಮ ಕವಿತೆಗಳಲ್ಲಿ ಅಡಕವಾಗಿಸಿರುವುದನ್ನು ಕಾಣಬಹುದಾಗಿದೆ.

ಸಂಸಾರದ ದೋಣಿಯು ಸಮಾಜದಂತ ಸಾಗರದಲ್ಲಿ ಸಾಗಿ ದಡ ಸೇರಲು ಹಾತೋರೆಯುವಾಗ ಅಲೆಗಳೆಂಬ ಅಡೆ–ತಡೆಗಳು ಎದುರಾಗಿತ್ತವೆ. ಅವನ್ನೆಲ್ಲ ದಾಟಿ ದಡ ಸೇರುವ ತವಕ ಇಲ್ಲಿ ‘ಕಿನ್ನರಿಯ ಕನಸು’ ಕವಿತೆಯಲ್ಲಿ ವ್ಯಕ್ತವಾಗಿದೆ. ಕನಸಿನಂತಿದ್ದರೂ ಕೂಡ ನಿಜ ಬದುಕಿನಲ್ಲಿ ಸತ್ಯತೆಯನ್ನು

ಕೊಂಡುಕೊಳ್ಳುವಲ್ಲಿ ಫಲಪ್ರದವಾಗಿದೆ. ಇಲ್ಲಿ ಸಂಕೇತ ರೂಪಕಗಳೊಂದಿಗೆ ಬದುಕಿನ ಅನನ್ಯತೆಗಳನ್ನು ಅನಾವರಣಗೊಳಿಸಿರುವುದು, ಕವಿಯ ಬೌದ್ಧಿಕ ಅರಿವಿನ ಅಂತರಾಳವನ್ನು ಮೆಚ್ಚುವಂತದ್ದೇ ಸರಿ.

ಇನ್ನು 'ಪಯಣ', 'ಅಮ್ಮ–ಹಸು–ಅನ್ನ', 'ಜಿಜ್ಞಾಸೆ', 'ಸಮಾಧಿಗೀತೆ', 'ದಾಂಪತ್ಯ ಗೀತೆ' ಕವಿತೆಗಳಲ್ಲಿ ಒಳ್ಳೆಯದು–ಕೆಟ್ಟದ್ದು, ಸುಖ–ದುಃಖಗಳ ಹಾದಿಯಲ್ಲಿ ಸುಂದರ ಜೀವನ ಸಾಗಿಸುವುದಕ್ಕೆ ಸಜ್ಜಾಗುವಿಕೆಯನ್ನು ಕವಿ ಸಾರಿದ್ದಾರೆ. ಪ್ರಕೃತಿಯಲ್ಲಿನ ನಿರಂತರ ಕಾರ್ಯಗಳ ಶ್ರಮತೆಯ ಫಲಗಳು, ಸಿಹಿ ಕನಸುಗಳು, ಹಸಿವಿನ ಆಕ್ರಂದನ, ಬಡತನ, ಪ್ರಾಯದ ಜೊತೆಗೆ ಬೆಸುಗೆ, ಹೆಣ್ಣಿನ ಹಿರಿಮೆ, ಮಮತೆ, ಕಾಳಜಿ, ಮೇಣದಂತೆ ತನ್ನ ತಾನು ಉರಿದು, ಮಕ್ಕಳ ಬಾಳಿಗೆ ಬೆಳಕಾಗುವ ಒಂದು ಹೆಣ್ಣು, ಪೆಟ್ಟು ತಿಂದು ದುಡಿದು ಅನ್ನ ಕೊಡುವ ಹಸು, ಭೂಮಿ, ಎಲ್ಲವೂ ಕೂಡ ಬದುಕಿನ ಭಾಗವೇ ಆಗಿದ್ದಾವೆ. ಕವಿಗೂ ಕೂಡ ಪ್ರಾಣಿ ದಯೆ, ಹೆಣ್ಣಿನ ಮೇಲಿನ ಪ್ರೀತಿ, ಕಾಳಜಿ, ಗೌರವ, ಅನ್ನಕ್ಕೆ ಕೊಡುವ ಸ್ಥಾನ, ಎಲ್ಲವೂ ಕವಿ ತನ್ನ ಬದುಕಿನ ಅಂತರಾಳದಿಂದ ತುಂಬಾ ಸನಿಹವಾಗಿ ಕಂಡದ್ದನ್ನು ವಾಸ್ತವ ಚಿತ್ರಣಗಳನ್ನು ಕವಿಯ ಕವಿತೆಯ ಸಾಲುಗಳಲ್ಲಿ ಕಾಣುತ್ತೇವೆ.

ಭಾವ–ಗುಣಗಳಿಂದ ಸ್ವಂತಿಕೆ ಕೂಡಿರುವುದು. 'ಬಲ್ಲಷ್ಟು ಬದುಕು, ದುಡಿತಕ್ಕೆ ತಕ್ಕ ಫಲ' ಎನ್ನುವ ಹಾಗೆ ಸೌಹಾರ್ದತೆಯ ಬಾಳು ಬಾಳುವುದನ್ನು ತಿಳಿಹೇಳುತ್ತಾರೆ. ಸಮಾಜದೊಳಗಿನ ಕಟು ಸತ್ಯಗಳನ್ನು ಹೊರಗೆಳೆಯುವುದರ ಜೊತೆಗೆ, ದೀನದಲಿತರ ಮೇಲಿನ ದೌರ್ಜನ್ಯ, ಕೊಲೆ–ಸುಲಿಗೆಗಳ ವಿರುದ್ಧ ಕ್ರಾಂತಿಕಾರಕ ವಿಚಾರ ವಿಷಯಗಳನ್ನು ಹೇರಳವಾಗಿ ವ್ಯಕ್ತಪಡಿಸಿದ್ದಾರೆ. ಈ ಎಲ್ಲದಕ್ಕೂ ನ್ಯಾಯ ಒಗಿಸಲು ಸೂಕ್ತನಾದ ಬೆಳಕಿನ ಸೂರ್ಯನ ಬರುವಿಕೆಯನ್ನು ಈ ಕೆಲ ಕವಿತೆಗಳು ಕಟ್ಟಿಕೊಡುತ್ತವೆ. ಬೆತ್ತಲಾಗಿದ್ದವರ ಬದುಕಿಗೆ ಬಟ್ಟೆ ತೊಡಿಸುವ ಪ್ರಯತ್ನಗಳು ಇಲ್ಲಿ ಕಾಣುತ್ತೇವೆ.

ಟಿ.ಯಲ್ಲಪ್ಪ ಅವರ "ಕಡಲಿಗೆ ಕಳಿಸಿದ ದೀಪ" ಕವನ ಸಂಕಲನವು ಕಾವ್ಯ ಕೇಂದ್ರವಾಗದೆ. ಬದುಕಿನ ಬವಣೆಯನ್ನು ಬಿತ್ತರಿಸುವ ಭೂಮಿಗೆಯಾಗಿ ಸಾಮಾಜಿಕ ಚರಿತ್ರೆಯ ವಿಡಂಬನೆ ಅಡಗಿದೆ. ಬಡತನದ ಬಾಳು ಕಾವ್ಯ ನೆಲೆಯಾಗಿ ನಿಂತಿರುವುದು ಗಮನಾರ್ಹ ಸಂಗತಿಯಾಗಿದೆ. ಅರ್ಥಪೂರ್ಣವಾದ ರೂಪಕಗಳು, ಸಂಕೇತಗಳು, ಪ್ರತಿಮೆಗಳು ಕಾವ್ಯದ ವಸ್ತು ರೂಪ ಪಡೆದು, ಕವಿ ಮನಸ್ಸಿನ ಸಹೃದಯರಿಗೆ ತಮ್ಮನ್ನು ತಾವು ಅವಲೋಕಿಸುವುದಕ್ಕೆ ಮುಂದಾಗುವಂತದ್ದು. ಕವಿತೆಗಳ ಒಳಗೆ ತಾಯಿ, ಅಕ್ಕ, ಹೆಣ್ಣು, ಅಪ್ಪ, ಹೀಗೆ ಹಲವು ಬದುಕಿನ ತೀವ್ರ ಸಂವೇದನೆ, ಪ್ರಜ್ಞೆಗಳ ವಿಷಯಗಳಾಗಿ ಪ್ರಮುಖವಾಗುತ್ತವೆ.

ವಿಚಾರವನ್ನು ತಿಳಿಸುವಾಗ ವಿವೇಚನೆಯ ಶಬ್ದಲಹರಿಯನ್ನು ಹೊಂದಿರಬೇಕಾಗುತ್ತದೆ. ಅದೇ ಹಾದಿಯಲ್ಲಿ ಸಾಗಿದ ಟಿ.ಯಲ್ಲಪ್ಪ ಅವರು ಕವಿತೆಗಳ ರಚನೆಯಲ್ಲಿ ಉತ್ತಮವಾಗಿ ಬಳಸಿಕೊಂಡಿದ್ದಾರೆ. ವಿಷಯ ವಸ್ತುಗಳು ತನ್ನ ಸುತ್ತಮುತ್ತಲಿನ ಪರಿಸರದೊಂದಿಗಿನ ನಂಟುನೊಂದಿಗೆ, ಅನುಭವದ ಆಕಾರದಿಯಾಗಿ ಸಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ವಂಚಿತರಾದ, ಹಿಂದುಳಿದ, ಶೋಷಿತರ, ತುಳಿತಕ್ಕೊಳಗಾದವರ ಚಿತ್ರಣಗಳು ಪ್ರತಿಭಟನಾತ್ಮಕ ಮಾರ್ಗವಾಗಿ, ವಿದ್ಯಾರ್ಥಿ ದೇಶದಿಂದಲೇ ಕಾವ್ಯ ಸೃಷ್ಟಿ ಮಾಡಿದ ಬಗ್ಗೆ ಅನನ್ಯ ಮತ್ತು ಅಪರೂಪವಾದದ್ದು ಎಂದು ಹೇಳಬಹುದು.

ಟಿ.ಯಲ್ಲಪ್ಪ ಅವರು ತಾನು ಕಂಡುಕೊಂಡ ನೈಜ ಬದುಕಿನ ಅನುಭವಜನ್ಯಗಳನ್ನು ಕಾವ್ಯವಾಗಿಸಿ, ಕನ್ನಡ ಸಾರಸ್ವತ ಕ್ಷೇತ್ರದ ಕಾವ್ಯಲೋಕಕ್ಕೆ ಆದರ್ಶ ರೂಪವಾಗಿದ್ದಾರೆ. ಬಡತನ, ಹಸಿವು, ನೋವು, ಅಪಮಾನ,

ರೈತರ ಗೋಳು, ಸಾಮಾಜಿಕ ನ್ಯಾಯ, ಸಾಂಸ್ಕೃತಿಕ ಸ್ಥಾನಮಾನ, ಹೆಣ್ಣಿನ ಸ್ಥಾನಮಾನ, ಸುಂದರ ಬದುಕಿನ ಕನಸಿನ ಮನಸುಗಳಿಗೆ ದಾರಿದೀಪದ ಬೆಳಕಿನಂತೆ ಪ್ರಜ್ವಲಿಸುತ್ತಾರೆ. ಪ್ರಸ್ತುತ ಸಮಾಜದೊಳಗಿನ ಅಜ್ಞಾನದ ಕಡಲಿಗೆ ಸುಜ್ಞಾನದ ಬೆಳಕಿನ ದೀಪವಾಗಿ ಟಿ.ಯಲ್ಲಪ್ಪ ಅವರ 'ಕಡಲಿಗೆ ಕಳಿಸಿದ ದೀಪ'ದ ಕವಿತೆಗಳು ಹೊಸ ಬದುಕನ್ನು, ದಿಕ್ಕನ್ನು ತೋರಿಸುವಂತಾಗಿವೆ.

**ಕೊನೆಯ ಟಿಪ್ಪಣಿಗಳು**

1. ಬಯಲು ಹಾಡು, ಕವಿತೆ (ಪು.1)
2. ಕಣ್ಣಾವಲಾ'ಗಿ ಕವಿತೆ (ಪು.2)
3. ಗೆಜ್ಜೆಗಳು, ಕವಿತೆ (ಪು.3)
4. ಒಡಲಾಳ'ದಿಂದ, ಕವಿತೆ (ಪು.4)
5. ಕಡಲಿಗೆ ಕಳಿಸಿದ ದೀಪ, ಕವಿತೆ (ಪು.4–5)
6. ಅಮ್ಮ–ಅಂಗಳ–ರಂಗೋಲಿ, ಕವಿತೆ (ಪು.5)
7. ಹಾಡುಗಳ ಜಾಡು ಹಿಡಿದು, ಕವಿತೆ (ಪು.6)

**ಆಕರ ಗ್ರಂಥ**


- ಯಲ್ಲಪ್ಪ, ಟಿ. (2008). *ಕಡಲಿಗೆ ಕಳಿಸಿದ ದೀಪ.* ಸಂಚಯ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (1997). *ದಲಿತ ಸಾಹಿತ್ಯ ಪ್ರವೇಶಿಕೆ.* ಶೈಲ ಪ್ರಕಾಶನ.
- ಅರವಿಂದ ಮಾಲಗತ್ತಿ. (2014). *ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ.* ಕನ್ನಡ ಸಾಹಿತ್ಯ ಪರಿಷತ್ತು.
- ದೇವಯ್ಯ ಹರವೆ. (1982). *ದಲಿತ ಸಾಹಿತ್ಯ ಮತ್ತು ಇತರೆ ಲೇಖನಗಳು.* ರಶ್ಮಿ ಉದ್ಯಮ ಕೇಂದ್ರ,
- ಮುನಿವೆಂಕಟಪ್ಪ, ವಿ. (2010). *ಕನ್ನಡ ದಲಿತ ಸಾಹಿತ್ಯ.* ವಿಚಾರವಾದಿ ಪ್ರಕಾಶನ.
- ಯರವಿನತೇಲಿಮಠ, ಸಿ.ಆರ್. (2020). ದಲಿತ ಬಂಡಾಯ ವಿಮರ್ಶೆ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಗಿರಿಯಪ್ಪ. (2018). *ದಲಿತ ಕಾವ್ಯ ಸ್ವರೂಪ ಮತ್ತು ಅನನ್ಯತೆ.* ಆಕೃತಿ ಆಶಯ ಪಬ್ಲಿಕೇಷನ್ಸ್.